

# ಆಸರೆ

■ ಮೂಲ ಹಿಂದಿ: **ಉಷಾ ಕಶ್ಯಪ್**
■ ಕನ್ನಡಕ್ಕೆ: **ಎಚ್.ಎಂ. ಕುಮಾರಸ್ವಾಮಿ**

ದೆಹಲಿಯ ಅಪೋಲೊ ಆಸ್ಪತ್ರೆಯ ಖಾಸಗಿ ಕೊಠಡಿಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದೇನೆ. ಎಪ್ಪತ್ತು ವರ್ಷ ದಾಟಿದ ನನ್ನ ಶರೀರದಿಂದ ಒಂದು ಕಿಡ್ನಿಯನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆದು ನನ್ನನ್ನು ಸಾವನ್ನು ಗೆದ್ದ ವೀರ ಎಂದು ಘೋಷಿಸಿಬಿಟ್ಟಿದ್ದಾರೆ. ನನ್ನ ಕಿಡ್ನಿಯ ಸಕ್ರಿಯತೆ ನಲವತ್ತು ಪರ್ಸೆಂಟ್‌ಗಿಂತ ಕಡಿಮೆಯಾಗಿ ಬಿಟ್ಟಿತ್ತು. ಆಗ ನನ್ನನ್ನು ಆಸ್ಪತ್ರೆಗೆ ದಾಖಲು ಮಾಡಿದ್ದರು. ಅಂತೂ ಯಾರದೋ ಆಶೀರ್ವಾದ, ದೇವರ ದಯೆಯಿಂದ ನನಗೆ ಜೀವದಾನ ಸಿಕ್ಕಿದೆ. ರೂಮಿನ ಕಿಟಕಿಯಿಂದ ಆಚೆ ನೋಡುತ್ತಿದ್ದೇನೆ. ಪಾರ್ಕ್‌ನಲ್ಲಿರುವ ಮೇ ಫ್ಲವರ್ ಮರಗಳಲ್ಲಿ ಕೆಂಬಣ್ಣದ ಹಾಸಿಗೆ ಹಾಸಿದಂತಿದೆ. ಮಂದಮಾರುತ ಮರಗಿಡಗಳನ್ನು ಜೋಕಾಲಿಯಾಡಿಸುತ್ತಿದೆ. ಇಲ್ಲಿಂದ ಓಡಿ ಹೋಗಿ ಆ ಕೆಂಪು ಹಾಸಿಗೆಯ ಮೇಲೆ ಕುಳಿತು ಬಿಡಲೇ ಎನಿಸುತ್ತಿದೆ. ಆಗ ಸ್ಕೂಟರ್‌ನಲ್ಲಿ ಎದುರಿಗೆ ಆದಿತ್ಯನನ್ನು ನಿಲ್ಲಿಸಿಕೊಂಡು ಹಿಂದಿನ ಸೀಟಿನಲ್ಲಿ ಸುಷ್ಮಾಳನ್ನು ಎತ್ತಿಕೊಂಡ ಅವಳನ್ನು ಕೂರಿಸಿಕೊಂಡು ಪ್ರತಿ ಭಾನುವಾರ ಇದೇ ಪಾರ್ಕಿಗೆ ಬರುತ್ತಿದ್ದ ದಿನಗಳು ನೆನಪಾದವು.

ಸುಷ್ಮಾ ಬಂದು ನನ್ನ ತಲೆಯನ್ನು ಸವರಿದ್ದಾಳೆ. ನನ್ನ ಕಣ್ಣುಗಳಲ್ಲಿ ನೀರು ಜಿನುಗಿತು. ಅವಳ ಅಮ್ಮನ ಹಾಗೆಯೇ ಸುಷ್ಮಾ ಕೂಡ. ಅವಳ ಅಮ್ಮ ನಮ್ಮ ಜೀವನಯಾತ್ರೆಯಲ್ಲಿ ನನ್ನನ್ನು ಒಂಟಿ ಮಾಡಿ ಹೋಗಿ ಎರಡು ವರ್ಷಗಳು ಕಳೆದುಹೋಗಿವೆ. ಅವತ್ತಿನಿಂದಲೂ ಸುಷ್ಮಾ ಆಗಾಗ ಫೋನ್ ಮಾಡಿ 'ಏನು ತಿಂದಿರಿ? ಮಾತ್ರೆ ತೆಗೆದುಕೊಂಡಿರೇನು? ನಿದ್ರೆ ಬಂತಾ...?' ಎಂದೆಲ್ಲ ವಿಚಾರಿಸಿಕೊಳ್ಳುತ್ತಾಳೆ. ಕುಕ್‌ಗೆ 'ಪಪ್ಪನಿಗೆ ಇಂಜೆಕ್ಷನ್ ಕೊಡಿ... ಬೇಯಿಸಿದ ತರಕಾರಿ ಕೊಡಿ... ಫ್ರೂಟ್ಸ್ ಸಲಾಡ್ ಕೊಡಲು ಮರೆಯಬೇಡಿ...' ಎಂದೆಲ್ಲ ಹೇಳುತ್ತಾಳೆ. ತನ್ನ ಮಕ್ಕಳ ಆರೈಕೆ ಮಾಡುವ ಹಾಗೆ ಈ ವಯಸ್ಸಿನಲ್ಲಿ ನನ್ನ ಸೇವೆ ಮಾಡುತ್ತಾಳೆ.

'ಪಪ್ಪ, ಸ್ವಲ್ಪ ಈ ಜ್ಯೂಸ್ ಕುಡಿಯಿರಿ. ಇನ್ನೊಂದೆರಡು ದಿನ, ನಾವು ಮನೆಗೆ ಹೋಗೋಣ.'

ಮಗಳು ನನಗೆ ಧೈರ್ಯ ತುಂಬಿದಷ್ಟೂ ಮನಸ್ಸು ಆತಂಕಕ್ಕೆ ಒಳಗಾಗುತ್ತದೆ.

ಯಾವ ಮನೆ...? ಮಗಳ ಮನೆಯೇ...? ಅಲ್ಲಿ ಅಳಿಯ ಇದ್ದಾನೆ. ಆತನ ಅಪ್ಪ, ಅಮ್ಮ ಜೊತೆಗೆ